(ದಿನಾಂಕಃ 22-10-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಮುಂದುವರೆದ ಪಾಟಿ ಸವಾಲು ಃ ಶ್ರೀ ಡಿ.ಪಿ.ಟಿ. ವಾದಿ ಪರ ವಕೀಲರಿಂದ -

ದಾವಾ ಸ್ವತ್ತುಗಳ ದಾಖಲೆಗಳು ಯಾರ ಯಾರ ಹೆಸರಿನಲ್ಲಿವೆ ಎಂದು ನನಗೆ ಮಾಹಿತಿ ಇರುತ್ತದೆ. ನಿ.ಪಿ-1 ಮತ್ತು 2 ರಲ್ಲಿರುವ 1965-66 ರ ಸಾಲಿನಲ್ಲಿ ಮೃತ ಶೆಟ್ಟೆಪ್ಪ ಮತ್ತು ಬಾಳಪ್ಪನ ಹೆಸರು ಇರುತ್ತದೆ. ನಿ.ಪಿ-3 ರಲ್ಲಿ 4 ಎಕರೆ 1 ಗುಂಟೆಯ ಪೈಕಿ 3 ಗುಂಟೆ 12 ಗುಂಟೆಗೆ ರತ್ನಾ ಬಾಳಪ್ಪಾ ಹೊಲೇರ ಇವರ ಹೆಸರು ದಾಖಲು ಇರುತ್ತದೆ. ಬಾಳಪ್ಪ ಗೂಳಪ್ಪ ಇವರ ಹೆಸರಿನಲ್ಲಿ 1 ಎಕರೆ 4 ಆಣೆ ದಾಖಲೆ ಇರುತ್ತದೆ ಎಂದರೆ ಸರಿ. 2005 ನೇ ಸಾಲಿನಲ್ಲಿ ಮೃತ ಬಾಳಪ್ಪ ಗೂಳಪ್ಪ ತನ್ನ ಹೊಸೆ ಸ್ವಪ್ನಾ ಗೂಳಪ್ಪ ಹೊಲೇರ ಇವರ ಹೆಸರಿಗೆ ಹಕ್ಕು ಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದ್ರಿ ಹಕ್ಕು ಬಿಟ್ಟ ಪತ್ರದಂತೆ ಡೈರಿ ದಾಖಲಿಸಿದ್ದು 1 ನೇ ವಾದಿ ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೂ ಮಾಡಿರುತ್ತೇನೆ ಎನ್ನುತ್ತಾರೆ. ಸದ್ರಿ ಅರ್ಜಿಗೆ ನಾನು ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳಲ್ಲಿ ಕಬ್ಬು , ಸೊಯಾಬಿನ ಬೆಳೆಯಲಾಗುತ್ತದೆ. ದಾವಾಸ್ತಿಗಳಲ್ಲಿ ಶೆಟ್ಟೆಪ್ಪ ಮತ್ತು ಬಾಳಪ್ಪನಿಗೆ ತಲಾ ಅರ್ಧರ್ಧ ಹಿಸ್ಸೆ ಇರುತ್ತದೆ ಎಂದರೆ ಸರಿ. ಸದ್ರಿ ಜಮೀನುಗಳನ್ನು ವಾದಿ ಪ್ರತಿವಾದಿಯರೇ ಸ್ವಾಧೀನ ಹೊಂದಿ ಸಾಗು ಮಾಡಿಕೊಂಡು ಬಂದಿರುತ್ತಾರೆ



ಎಂದರೆ ಸರಿ. ಶೆಟ್ಟೆಪ್ಪನ ವಾರಸುದಾರರು ಶಿವನವ್ವ , ಬಸವ್ವ ತುಳಸವ್ವ ಎಂದರೆ ಸರಿ . ಅಂತಹ ವಾರಸಾ ಪ್ರಮಾಣ ಪತ್ರವನ್ನು ಈಗ ವಾದಿ ಪರ ವಕೀಲರು ಹಾಜರ ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು. ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುವಂತೆ ದ್ಯಾಮವ್ವ ಬಸವ್ವ ತುಳಸವ್ವ ಇವರಿಗೆ ನಾನು ಹಕ್ಕು ಬಿಟ್ಟ ಪ್ರಮಾಣ ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಕೇಸಿಗೆ ಅನುಕೂಲವಾಗುವಂತೆ ಉತಾರನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಶೆಟ್ಟೆಪ್ಪ ನನಗೆ ಭಕ್ಷೀಸು ಪತ್ರ ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೇ ಸರಿ ಅದೇ

ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ